ಎಂ.ಎಲ್.ಎ.ಯವರ ಪಿ.ಎ. ಬರ್ತಾರೆ ಅಂದಿದ್ದಕ್ಕೆ ಊರ ಗೌಡ್ರು ಕೂಡ ಬಂದಿದ್ರು. ಇತ್ತ ನಂಜಪ್ಪನು ಬಂದಿದ್ದ, ಜನ ಸೇರ್ಕಂತ ಸೇರ್ಕಂತ ಊರುಕೇರಿನೆ ಬಂದು ಸೇರ್ಕಂಡ್ತು, ಅಗ ಇಗ ಅನ್ನೊದ್ರೊಳಗೆ ಬಿಳಿ ಕಾರೊಂದು ಬಂದು ನಿಂತೇ ಬಿಡ್ತು. ಊರಗೌಡ್ರು ಮುಂದೋಗಿ ಪಿ.ಎ. ಸುಬ್ಬೇಗೌಡ್ರು ಕೈ ಕುಲುಕಿ ಕಟ್ಟೆ ಮ್ಯಾಲೆ ಹಾಕಿದ್ದ ಚಾಪೆ ಮೇಲೆ ಕರ್ಕೊಂಡು ಬಂದು ಕೂರಿಸಿದ್ರು. ಇವರ ಜೊತೆಗೇ ಬಂದಿದ್ದ ಗಾಂಧಿವಾದಿ ನಿಂಗೇಗೌಡ್ರುನ್ನು ಕೂಡ ನಮಸ್ಕರಿಸಿ ಅವರ ಪಕ್ಕನೇ ಕೂರ್ಸಿದ್ರು.

ಅರಳಿಕಟ್ಟೆ ಮೇಲೆ ಕುಳಿತ ಈ ಮೂರು ಜನ ಅದೇನೋ! ಗುಸು ಗುಸು ಅಂತ ಮಾತಾಡ್ಕಂಡು ಅದ್ರು ಮಧ್ಯದಲ್ಲೆ ಅವಸರದಲ್ಲೇ ಎದ್ದು ನಿಂತ ಪಿ.ಎ ಸುಬ್ಬೇಗೌಡ್ರುಗಬ್ ಚುಪ್ ಆಗಿ ಕುಳಿತಿದ್ದ ಊರ ಜನರಿಗೆ, 'ನೋಡ್ರಪ್ಪ ಕಲ್ಲಳ್ಳಿ ಗ್ರಾಮಸ್ಥರೆ, ನಾನು ಎಂ.ಎಲ್.ಎ ಯವರ ಸೂಚನೆ ಮೇರೆಗೆ ನಿಮ್ಮೂರಿಗೆ ಬಂದಿದ್ದೇನೆ. ನಮ್ಮ ತಾಲ್ಲೋಕಿಗೆ ಬಂದ ಸರ್ಕಾರದ ಸೌಲತ್ತಿನಲ್ಲಿ ಅಂಬೇಡ್ಕರ್ ನಿಗಮದ ಬೋರಿನ ಸೌಲಭ್ಯವನ್ನು ನಿಮ್ಮ ಊರಿಗೂ ಒಂದು ಕೊಟ್ಟಿದ್ದೇವೆ. ಹಾಗಾಗಿ ನಿಮ್ಮ ಊರಲ್ಲಿ ಯಾರು ಜಮೀನು ಹೊಂದಿದ್ದೀರೋ ಅವರು ಕೊರಿಸಿಕೊಳ್ಳಬಹುದು' ಎಂದಾಗ ಹಟ್ಟಿ ಜನರೆಲ್ಲ ಒಬ್ಬರ ಮುಖ ಒಬ್ಬರು ನೋಡ್ಕಂಡ್ರು ಕೆಲವರು, 'ಸಾಹೇಬ್ರೆ ನಮ್ಮ ಹಟ್ಟಿಗೆ ಒಂದು ಕೊಟ್ರೆ ಯಂಗೆ , ಎಷ್ಟೊ ಜನಕ್ಕೆ ಜಮೀನು ಇದಾವೆ' ಎಂದಾಗ, ಸುಬ್ಬೇಗೌಡ್ರು 'ಜಮೀನು ಇರೋದಲ್ಲ ಮುಖ್ಯ ಕಣಪ್ಪ ಈ ಸೌಲಭ್ಯ ಪಡೆಯೋದಕ್ಕೆ ಜಮೀನು ಅವರ ಹೆಸರಲ್ಲೇ ಇರಬೇಕು, ನಿಮ್ಮ ತಾತ, ಮೂತ್ತಾತ, ಅಪ್ಪನ ಹೆಸರಲ್ಲಿ ಇದ್ದು ಅವರು ತೀರಿ ಹೋಗಿದ್ರೆ ಆಗಲ್ಲ', ಅನ್ನೋ ಮಾತು ಕೇಳಿ ಹಟ್ಟಿ ಜನರ ಮಾತುಗಳೆಲ್ಲ ಗಂಟಲೊಳಗೆ ಹಿಂಗಿ ಹೋದವು, ಹಟ್ಟಿ ಯಜಮಾನ ಎದ್ದು 'ಸ್ವಾಮಿ ನಮಗೂ ಇದ್ದಂಗೆ ಹಟ್ಟೀಲಿ ರವಷ್ಟು ಜನ್ರಿಗೆ ಜಮೀನು ಇವೆ, ಅವುಕ್ಕೆ ಪಾಣಿ ಪಟ್ಟೆ ಏನೂ ಇಲ್ಲ, ಅವುನ್ನ ನಮ್ಮ ಹೆಸರಿಗೆ ಮಾಡಿಸಿಕೊಡಿ. ಅಮೇಲೆ ಬೋರ್ ಕೊಡೀರಂತೆ, ಈಗ ಕೊಟ್ಟರೆ ಎಲ್ಲರು ಕೇಳ್ತಾರೆ ಸ್ವಾಮಿ, ಬಂದಿರೋದು ಒಂದು ಅಂಬ್ತಿರ' ಎಂದಾಗ, ಸುಬ್ಬೇಗೌಡ್ರು 'ಅದು ಹಾಗಿರಲಿ ಈಗ ಬಂದಿರೋ ಒಂದನ್ನ ಏನ್ ಮಾಡ್ಲಿ' ಎಂದಾಗ ನಿಂಗೇಗೌಡ್ರು ಎದ್ದು 'ನೋಡ್ರಪ್ಪ ನಿಮ್ಮ ಊರಿನ ಹನುಮಪ್ಪ ಕಷ್ಟಪಟ್ಟು ಸ್ವಲ್ಪಮಟ್ಟಿಗೆ ಓದಿಕೊಂಡಿರೋದಕ್ಕೆ ಅವನ ತಾತನ ಜಮೀನ ಅವನ ಹೆಸರಿಗೆ ಮಾಡಿಸ್ಕಂಡೌನೆ, ಹಾಗಾಗಿ ಯಾರು ಕೂಡ ಒಬ್ಬರಿಗೊಬ್ಬರು ದ್ವೇಷ ಕಟ್ಟಕೊಳ್ಳದೆ, ಯಾವುದನ್ನು ಮನಸಲ್ಲಿ ಇಟ್ಟುಕೊಳ್ಳದೆ, ಯಾರ ಕೆಟ್ಟ ಮಾತುನ್ನು ತಕ್ಕಳದಲೆ ಎಲ್ಲರೂ ಒಮ್ಮತದಿಂದ ಈ ಬಾರಿ ಅವನಿಗೆ ಮಾಡಿಸಿ ಕೊಡಿ, ಮುಂದೆ ಈತರ ಅವಕಾಶ ಸಿಕ್ಕಾಗ ನೀವು ಮಾಡಿಸಿಕೊಳ್ಳಿ ಇದು ನನ್ನ ಅಭಿಪ್ರಾಯ' ಎಂದಾಗ, ಹಟ್ಟಿ ಜನರು ಸಣ್ಣಗೆ 'ಒಬ್ರಿಗೊಂದು ಒಬ್ರಿಗೊಂದು ಮಾಡಕೆ ಬಂದೌರೆ ಕಣ್ರೋ, ಎಂಬ ಮಾತುಗಳು ಬಂದಾಗ, ಸುಬ್ಬೇಗೌಡ್ರು ಹಟ್ಟಿ ಯಜಮಾನನಿಗೆ 'ನೋಡ್ರಿ ಯಜಮಾನ್ರೆ ಏನೋ ಒಂದು ಒಳ್ಳೆ ಕೆಲಸ ಬಂದಿದೆ, ನಿಮ್ಮ ಹಟ್ಟೀಲಿ ಯಾರು ಕೂಡ ಜಮೀನನ್ನು ನಿಮ್ಮನಿಮ್ಮ ಹೆಸರಿಗೆ ಮಾಡಿಸ್ಕೊಂಡಿಲ್ಲ. ಹಾಗಾಗಿ ಈ ಬಾರಿ ನಮ್ಮ ನಿಂಗೇಗೌಡ್ರ ಮಾತಿಗೆ ಬೆಲೆ ಕೊಟ್ಟು ಅವರು ಹೇಳಿದಂತೆ ನಡ್ಕೊಳ್ಳಿ, ಮುಂದೆ ಒಳ್ಳೇದು ಆಗುತ್ತೆ, ಇನ್ನು ಮುಂದೆ ಅವಕಾಶಗಳ ಬಂದಾಗ ಜಮೀನು ಇರೋರು ಮೊದಲು ಪೌತಿ ಖಾತೆಗೆ ಅರ್ಜಿಹಾಕಿ, ತಮ್ಮತಮ್ಮ ಹೆಸರಿಗೆ ಜಮೀನು ಮಾಡಿಸ್ಕೊಳ್ಳಿ' ಎಂದೇಳಿ ಎಲ್ಲರನ್ನು ಸಮಾಧಾನ ಮಾಡಿದಾಗ ಸಣ್ಣತನ ತೋರಿಸುವ ಮಂದಿಯಲ್ಲ ಮರುಮಾತಾಡದೆ ಮೌನ ವಹಿಸಿದರು.

ಯಜಮಾನಪ್ಪ ಕೂಡ, 'ಸರಿ ಸ್ವಾಮಿ ಹನುಮಪ್ಪಂಗೆ ಈ ಸಾರಿ ಕೊಡಿ' ಎಂದಾಗ ಹಿಂದೆ ಕೂತಿದ್ದ ಕೆಲವರು ಏನೇನೋ ಮಾತುಗಳು ಬರ್ತಿದ್ದಾಗಲೇ ಅವಸರದಲ್ಲಿದ್ದ ಸುಬ್ಬೇಗೌಡ್ರು ಹನುಮಪ್ಪನ ಹೆಸರನ್ನು ದಾಖಲಿಸಿಕೊಂಡು ಬರಬರನೇ ಕಾರ ಹತ್ತೇಬಿಟ್ರು. ಹನುಮಪ್ಪ, ನಿಂಗೇಗೌಡ್ರುಗೆ ಕೃತಜ್ಞತೆಯಿಂದ ಕೈ ಮುಗಿದಾಗ ಅವರು ನಗು ಚೆಲ್ಲಿ, 'ನಿನ್ನ ಶ್ರಮಕ್ಕೆ ಸಿಕ್ಕ ಫಲ ಕಾಣಯ್ಯ' ಎಂದು ಕಾರು ಹತ್ತಿದರು, ಅಲ್ಲಿ ಇದ್ದ ಜನವೆಲ್ಲ ಕ್ಷಣಮಾತ್ರದಲ್ಲೇ ಕರಗಿ ಮಾಯವಾಗಿತ್ತು. ಅವೊತ್ತಿನ ರಾತ್ರಿ ಕಲ್ಲಳ್ಳಿಗೆ ಸಹಜವಾದ ರಾತ್ರಿಯಾಗಿರಲಿಲ್ಲ. ಕೇರಿಯ ಓಣಿ ಓಣಿಯಲ್ಲಿ ದೀಪಗಳು ಮಧ್ಯರಾತ್ರಿಯವರೆಗೂ ಉರಿಯಿತ್ತಲೇ ಇದ್ದವು, ಇತ್ತ ಹನುಮಪ್ಪನ ಕುಟುಂಬ ಮನೆಯ ಮಂದ ದೀಪದ ಬೆಳಕಿನಲ್ಲಿ ಗಾಢ ನಿದ್ರೆಯಲ್ಲಿತ್ತು.

●